## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮುನಿರಾಜುಗೌಡ ಪಿ.ಎಂ. ಇವರ ನಿಯಮ 330 ರಡಿ ನೀಡಿರುವ ಸೂಚನೆಗೆ ಉತ್ತರ

ಸೂಚನೆ : ಕೋಲಾರ ಮತ್ತು ಚಿಕ್ಕಬಳ್ಳಾಪುರ ಕೇಂದ್ರ ಸಹಕಾರ ಬ್ಯಾಂಕಿನ ವಿವಿಧ ಶಾಖೆಗಳ ಮತ್ತು ವಿವಿಧ ಸಹಕಾರ ಸಂಘಗಳ ಮೂಲಕ ಸ್ವಸಹಾಯ ಸಂಘಗಳಿಗೆ ಕೇಂದ್ರ ಮತ್ತು ನೀಡುವ ಬಡ್ಡಿ ಕ್ಲೈಂ ಮಾಡುವಲ್ಲಿ 2017-18 ರಿಂದ 2021-22ರವರೆಗೆ ಅವ್ಯವಹಾರವಾಗಿರುತ್ತದೆ. ಈ ವ್ಯವಹಾರದ ಬಗ್ಗೆ ಮರು ಲೆಕ್ಕಪರಿಶೋಧನೆ ಮಾಡುವಂತೆ ಸಹಕಾರ ಇಲಾಖೆ ಸೂಚಿಸಿದ್ದರೂ ಸಹ ಲೆಕ್ಕಪರಿಶೋಧಕರು ಅಧ್ಯಕ್ಷರ ಜೊತೆ ಶಾಮೀಲಾಗಿ ಅನಗತ್ಯ ವಿಳಂಬ ಮಾಡುತ್ತಿದ್ದಾರೆ. ಅಸ್ತಿತ್ವದಲ್ಲಿ ಇಲ್ಲದ ಎಸ್‌ಹೆಚ್‌ಜಿಗಳಿಗೆ ಸಾಲ ನೀಡುವುದಾಗಿ ಸುಳ್ಳು ದಾಖಲೆ ಸೃಷ್ಟಿಸಿರುತ್ತಾರೆ. ರೈತರ ಸಾಲ ಮನ್ನಾ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ಮಾಡಿ ಸಹಕಾರಿ ಕ್ಷೇತ್ರಕ್ಕೆ ಸಂಬಂಧವಿಲ್ಲದ ಸಂಸ್ಥೆಗಳಿಗೆ ಹಣ ವರ್ಗಾವಣೆ ಮಾಡಿರುತ್ತಾರೆ. ಮುಂದುವರೆದು, ಸೆವನ್ ಸ್ಟಾರ್ ಬಳಕೆದಾರರ ಸಂಘ, ಬಂಗಾರಪೇಟೆ, ಕೋಲಾರ ಶಾಖೆಯು ನೋಂದಣಿಯಾದ ಮೂರು ತಿಂಗಳೊಳಗಾಗಿ ಸಹಕಾರ ಸಂಘದ ಕಾಯ್ದೆಗೆ ವಿರುದ್ಧವಾಗಿ ಕೋಟ್ಯಾಂತರ ರೂಪಾಯಿ ಸಾಲ ನೀಡಿರುತ್ತಾರೆ. ಸದರಿ ಅಧ್ಯಕ್ಷರೇ ಇರುವ ಕೋಲಾರ ಗೃಹ ನಿರ್ಮಾಣ ಸಹಕಾರ ಸಂಘ ಮಾರಾಟಕ್ಕೆ ನಿಗಧಿಪಡಿಸಿದ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ನಿವೇಶನಗಳನ್ನು ನೋಂದಣಿ ಮಾಡಿಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುತ್ತಾರೆ. ಅಲ್ಲದೇ, ಕಾಮಗಾರಿಯಲ್ಲಿ ಕಡಿತಗೊಳಿಸಿದ ಐ.ಟಿ. ಮತ್ತು ಇತರೆ ಉಪಕರಣಗಳನ್ನು ಸಂಬಂಧಪಟ್ಟ ಸರ್ಕಾರದ ಲೆಕ್ಕಶೀರ್ಷಿಕೆಗೆ ಭರಣ ಮಾಡಿರುವುದಿಲ್ಲ. ಇಂತಹ ಗಂಭೀರ ವಿಷಯವನ್ನು ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

## ಉತ್ತರ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಸಂಬಂಧ ದೂರರ್ಜಿ ಸ್ವೀಕೃತವಾದ ಹಿನ್ನೆಲೆಯಲ್ಲಿ ಬ್ಯಾಂಕಿನ 2017-18 ರಿಂದ 2020-21ನೇ ಸಾಲುಗಳ ಲೆಕ್ಕಪುಸ್ತಕಗಳನ್ನು ಮರು ಲೆಕ್ಕಪರಿಶೋಧನೆ ಕೈಗೊಳ್ಳಲು ದಿನಾಂಕ:05.01.2023 ರಂದು ಸರ್ಕಾರವು ಆದೇಶಿಸಿರುತ್ತದೆ.

ದಿನಾಂಕ:22.02.2023 ರಂದು ಉಪನಿರ್ದೇಶಕರ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯನ್ನು ಮರು ಲೆಕ್ಕಪರಿಶೋಧನೆಗೆ ನೇಮಿಸಲು ಸರ್ಕಾರದಿಂದ ನಿರ್ದೇಶಿಸಲಾಗಿದೆ. ಮರು ಲೆಕ್ಕಪರಿಶೋಧನೆ ಪ್ರಾರಂಭಿಸಲು ದಾಖಲೆಗಳನ್ನು ಹಾಜರುಪಡಿಸುವಂತೆ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಲೆಕ್ಕಪರಿಶೋಧನಾ ತಂಡ ದಿನಾಂಕ:07.06.2023ರಂದು ಸೂಚಿಸಲಾಗಿ, ಬ್ಯಾಂಕಿನವರು ಮರು ಲೆಕ್ಕಪರಿಶೋಧನೆಗೆ ಅವಶ್ಯವಿರುವ ಯಾವುದೇ ದಾಖಲೆಗಳನ್ನು ಇದುವರೆವಿಗೂ ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಮರು ಲೆಕ್ಕಪರಿಶೋಧನೆ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಅಲ್ಲದೇ, ಸದರಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಬ್ಯಾಂಕಿನ ಮರುಲೆಕ್ಕಪರಿಶೋಧನೆಯನ್ನು ಕೈಬಿಡಲು ದಿನಾಂಕ: 08.06.2023ರಂದು ಕೋರಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಮುಂದುವರೆದು, ಲೆಕ್ಕಪರಿಶೋಧಕರು ಅಧ್ಯಕ್ಷರ ಜೊತೆ ಶಾಮೀಲಾಗಿ ಅನಗತ್ಯ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಮರು ಲೆಕ್ಕಪರಿಶೋಧನೆಗೆ ಅಗತ್ಯವಿರುವ ದಾಖಲೆಗಳನ್ನು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಜರುಪಡಿಸದೇ ಇರುವುದರಿಂದ ಮರು ಲೆಕ್ಕಪರಿಶೋಧನೆಯ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ನಿ., ಕೋಲಾರ ಈ ಬ್ಯಾಂಕಿನಿಂದ ಅಸ್ತಿತ್ವದಲ್ಲೇ ಇಲ್ಲದ ಎಸ್.ಹೆಚ್.ಜಿ.ಗಳಿಗೆ ಸಾಲ ನೀಡಿರುವುದಾಗಿ ದಾಖಲೆ ಸೃಷ್ಟಿಸಿ ಬಡ್ಡಿ ಸೌಲಭ್ಯ / ಸಬ್ಸಿಡಿ ದುರುಪಯೋಗವಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ. ಬ್ಯಾಂಕಿನಿಂದ ಅಸ್ತಿತ್ವದಲ್ಲಿ ಇಲ್ಲದ ರೈತರ ಹೆಸರಿನಲ್ಲಿ ಸಾಲ ಮನ್ನಾ ಯೋಜನೆಯಡಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಸೆವೆನ್ ಸ್ಟಾರ್ ಸಹಕಾರ ಸಂಘ ನಿ., ಬಂಗಾರಪೇಟೆ, ಈ ಸಂಘವು ದಿನಾಂಕ:21.06.2019 ರಂದು ನೋಂದಣಿಯಾಗಿರುತ್ತದೆ. ಈ ಸಂಘಕ್ಕೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ. ಬ್ಯಾಂಕಿನಿಂದ 2019-20ನೇ ಸಾಲಿನಲ್ಲಿ ರೂ.10 ಕೋಟಿಗಳ ನಗದು ಪತ್ತಿನ ಸಾಲವನ್ನು ಅಕ್ಕಿ ಮತ್ತು ರಾಗಿ ಫ್ಲೋರ್ ಮಿಲ್ ಉದ್ದಿಮೆ ನಡೆಸಲು ದುಡಿಯುವ ಬಂಡವಾಳವಾಗಿ ಮಂಜೂರು ಮಾಡಲಾಗಿರುತ್ತದೆ. ಈ ಸಾಲವು ದಿನಾಂಕ:09.12.2021 ರಂದು ಬ್ಯಾಂಕಿಗೆ ಸಂಪೂರ್ಣವಾಗಿ ಮರುಪಾವತಿಯಾಗಿದ್ದು, ಸದರಿ ಸಂಘದಿಂದ ಬ್ಯಾಂಕಿಗೆ ಯಾವುದೇ ಸಾಲ ಬಾಕಿ ಇರುವುದಿಲ್ಲ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರು ಕೋಲಾರ ತಾಲ್ಲೂಕು ಗೃಹ ನಿರ್ಮಾಣ ಸಹಕಾರ ಸಂಘ ನಿ., ಇದರ ಅಧ್ಯಕ್ಷರಾಗಿರುವುದಿಲ್ಲ. ಸದರಿ ಸಂಘದ ಅಧ್ಯಕ್ಷರು ಬಿ.ಕೆ. ನಾಗರಾಜ್ ರವರು ಆಗಿರುತ್ತಾರೆ. ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಂತೆ ನಿವೇಶನ ಠೇವಣಿಯನ್ನು ಸದಸ್ಯರಿಂದ ಸಂಗ್ರಹಿಸಿ ಸದರಿ ಮೊತ್ತಕ್ಕೆ ಸಮನಾಗಿ ನಿವೇಶನಗಳನ್ನು ನೋಂದಣಿ ಮಾಡಿ ಕೊಡಲಾಗಿರುತ್ತದೆ.

ಆದುದರಿಂದ, ನಿಗದಿಪಡಿಸಿರುವ ಬೆಲೆಗಿಂತ ಕಡಿಮೆ ಬೆಲೆಗೆ ನಿವೇಶನಗಳನ್ನು ನೋಂದಣಿ ಮಾಡಿಕೊಟ್ಟಿರುವುದು ಕಂಡು ಬಂದಿರುವುದಿಲ್ಲ. ಅಲ್ಲದೇ ನಿವೇಶನ ನೋಂದಣಿ ಸಂದರ್ಭದಲ್ಲಿ ಸದಸ್ಯರುಗಳೇ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕಗಳನ್ನು ದಸ್ತಾವೇಜು ನೋಂದಾಯಿಸುವ ಪ್ರಾಧಿಕಾರಕ್ಕೆ ಪಾವತಿಸಿರುವುದರಿಂದ ಸಂಘವು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವುದಿಲ್ಲ.

ಸಂಘದ ಜಮೀನು ಖರೀದಿ ಮತ್ತು ಬಡಾವಣೆ ಅಭಿವೃದ್ಧಿಗಾಗಿ ಗುತ್ತಿಗೆದಾರರಾದ ಕಾಮಧೇನು ಇನ್‌ಫ್ರಾ ಪ್ರೈವೇಟ್ ಲಿಮಿಟೆಡ್ ರವರಿಗೆ ಮುಂಗಡ ಪಾವತಿಸುವಾಗ 2009-10 ರಿಂದ 2011-12ರ ವರೆಗೆ ಮೂರು ವರ್ಷಗಳಲ್ಲಿ ರೂ.30,23,280.00ಗಳನ್ನು ಕಟಾಯಿಸಿರುವುದು ಲೆಕ್ಕಪರಿಶೋಧನಾ ವರದಿಯಿಂದ ಕಂಡು ಬಂದಿರುತ್ತದೆ. 2014-15ನೇ ಲೆಕ್ಕಪರಿಶೋಧನಾ ವರದಿಯಂತೆ ಆದಾಯ ತೆರಿಗೆ ಶೀರ್ಷಿಕೆಯಿಂದ ಬದಲಾಯಿಸಿ, ಹಿಂದಿನ ಜವಾಬ್ದಾರಿಯಂತೆ ಎಂದು ಜವಾಬ್ದಾರಿ ತಃಖ್ತೆಯಲ್ಲಿ ಶೀರ್ಷಿಕೆ ಬದಲಾಯಿಸಲಾಗಿದೆ. ಸದರಿ ಆದಾಯ ತೆರಿಗೆ ಮೊತ್ತವನ್ನು 2019-20ನೇ ಸಾಲಿನವರೆಗೆ ಯಥಾವತ್ತಾಗಿ ಕಾಂಟ್ರಾ ಎಂಟ್ರಿ ಮುಂದುವರೆಸಲಾಗಿದೆ. ಆದಾಯ ತೆರಿಗೆ ಇಲಾಖೆಗೆ ಪಾವತಿಸದೆ ಶೀರ್ಷಿಕೆಯನ್ನು ಬದಲಾಯಿಸಿರುವುದು ತಪ್ಪಾಗಿರುತ್ತದೆ. ಈ ಸಂಬಂಧ ಸಂಘದ 2014-15ನೇ ಸಾಲಿನ ಲೆಕ್ಕಪುಸ್ತಕಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(13)ರಂತೆ ಮರು ಲೆಕ್ಕಪರಿಶೋಧನೆಗೆ ಹಾಗೂ 2020-21ನೇ ಸಾಲಿನ ಲೆಕ್ಕಪುಸ್ತಕಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(13)(ಎ)ರಂತೆ ಮರುಪರಿಶೀಲನೆಗೆ ಒಳಪಡಿಸಿ ಆದೇಶಿಸಲಾಗಿದೆ. ಮರುಲೆಕ್ಕಪರಿಶೋಧನೆ ಮತ್ತು ಮರುಪರಿಶೀಲನಾ ವರದಿ ಬಿಡುಗಡೆಯಾದ ನಂತರ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮವಿಡಲಾಗುವುದು.

*ಸಂಖ್ಯೆ: ಸಿಒ 31 ಸಿಹೆಚ್‌ಎಸ್ 2023*

K-N-Rajanna

(ಕೆ.ಎನ್. ರಾಜಣ್ಣ)
ಸಹಕಾರ ಸಚಿವರು